ಎರಡೂಕಡೆ ಬೀದಿಗೆ ಮುಖಮಾಡಿಕೊಂಡ ಹಂಚಿನಮನೆಗಳು; ಅವುಗಳ ತೆರೆದ ಜಗುಲಿಗಳು; ಅಲ್ಲಿ ಸಂಜೆಯಾಗುತ್ತಿದ್ದಂತೆ, ನಸ್ಯ ಏರಿಸುತ್ತಾ ಸುದ್ದಿ ವಿನಿಮಯ ಮಾಡುತ್ತ ಕುಳಿತುಕೊಳ್ಳುವ ಗೃಹವಾಸಿಗಳು. ವರ್ಷಕ್ಕೊಮ್ಮೆ ಇಕ್ಬಾಲು ಅವನ ಸಂಗಡಿಗನೊಬ್ಬನ ಜೊತೆ ಬಂದು ತೇರುಮನೆಯಲ್ಲಿ ಗಂಟಿಳಿಸಿದ ನಂತರ ಊರಲ್ಲಿನ ಎಲ್ಲಾ ಕೇರಿಗಳ ಮನೆಮನೆಗೆ ಹೋಗಿ ಪಾತ್ರೆ ಕೊಡಿ ಅಂತ ಸಂದೇಶ ಮುಟ್ಟಿಸುತ್ತಿದ್ದ. 'ಕಲಗಾರ ಸಾಬರು' ಬಂದಿರುವ ಸುದ್ದಿ, ದಿನನಿತ್ಯ ತಿಕ್ಕಿಸಿಕೊಂಡೊ ಕಲ್ಲಮೇಲೆ ಕುಟ್ಟಿಸಿಕೊಂಡೊ ತೂತುಬಿದ್ದು ನಬ್ಬಿದ ಪಾತ್ರೆಗಳಿರುವ, ಎಲ್ಲರಿಗೆ ತಲುಪಿ ಮರುದಿನದ ಬೆಳಗು ಟಣ್... ಟಣ್ ಠಂಯ್... ಠಂಯ್ ಸಪ್ಪಳದಿಂದಲೆ ಆಗುತ್ತಿತ್ತು. ಚಹ ತಿಂಡಿಯಾದಮೇಲೆ ನಾವು ಮಕ್ಕಳು ಅಲ್ಲಿ ಹೋಗಿ ನಿಂತು ಸಾಬರ ಕೆಲಸ ನೋಡುತ್ತಾ ವಿಸ್ಮಯಕ್ಕೊಳಗಾಗುತ್ತಿದ್ದೆವು. ತೇರಿನೆದುರು ನೆಲದಲ್ಲಿ ತೋಡಿ ಮಾಡಿದ ಹೊಂಡದೊಲೆಯ ಬುಡಕ್ಕೆ ಮಣ್ಣಲ್ಲಿಳಿದು ಅಂತರ್ಧಾನವಾಗುವ ಕೊಳವೆ, ಅದಕ್ಕೆ ಜೋಡಿಸಿದ ಕುರಿಯ ಇಡೀ ತೊಗಲಿನಲ್ಲಿ ಮಾಡಿದ ಚೀಲ. ಚೀಲದ ಕುತ್ತಿಗೆಯನ್ನು ಹಿಡಿದು ಒಂದು ಲಯದಲ್ಲಿ ಸಡಿಲಬಿಡುವುದು ಒತ್ತುವುದು ಮಾಡುತ್ತಿದ್ದರೆ ಅದರಲ್ಲಿ ಗಾಳಿ ತುಂಬಿಕೊಂಡು ಕೊಳವೆಯಲ್ಲಿ ಸರಬರಾಜಾಗುತ್ತ ಇದ್ದಿಲು ನಿಗಿನಿಗಿ ಪ್ರಜ್ವಲಿಸುತ್ತಿತ್ತು. ಆಮೇಲೆ ಚರ್ಮದ ಜಾಗದಲ್ಲಿ ಗರಗರ ಹಿಡಿಕೆ ತಿರುಗಿಸುವ ಯಂತ್ರ ಬಂತು. ಪ್ರಜ್ವಲಿಸುವ ಕೆಂಡದಮೇಲೆ ಹಿತ್ತಾಳೆ ತಾಮ್ರದ ಪಾತ್ರೆಗಳನ್ನಿಟ್ಟು ಕಾದಮೇಲೆ ಕಬ್ಬಿಣದ ಬಾಗುಹಾರೆಗೆ ಸಿಕ್ಕಿಸಿ ಸುತ್ತಿಗೆಯಲ್ಲಿ ಠಣ್ಣ ಠಣ್ಣ ಅಂತ ಹದವಾಗಿ ಕುಟ್ಟುತ್ತ ತೂತು ಬಿದ್ದಲ್ಲಿ ಮುಚ್ಚುತ್ತ ಬೆಸುಗೆ ಹಾಕುತ್ತಿದ್ದರು. ಕಾಯಿಸಿದ ಪಾತ್ರೆಯೊಳಗೆ ತವರದ ಪುಡಿ ಹಾಕಿ ಅರಿವೆ ಚೂರಿಂದ ಗಸಗಸನೆ ಎಲ್ಲಾಕಡೆ ಹರಡಿ ಲೇಪಿಸಿ ಬೆಳ್ಳಿಬಣ್ಣದ ಕಲಾಯಿ ಮಾಡಿ ವಾಪಸು ಮನೆಗೆ ಮುಟ್ಟಿಸುತ್ತಿದ್ದರು. ಸಾಬರು ಬೀಡಿ ಹಚ್ಚುವುದು ಅದೇ ಬೆಂಕಿಯಲ್ಲಿ; ಅನ್ನ ಬೇಯಿಸಿಕೊಳ್ಳುವುದೂ ದುರಸ್ತಿಗೆ ಕೊಟ್ಟ ಪಾತ್ರೆಯಲ್ಲೆ. ತಮ್ಮ ಪಾತ್ರೆಯಲ್ಲಿ ಅನ್ನ ಬೇಯಿಸಿದರೆ ಜನ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಅದೇ ಬೆಂಕಿಯಮೇಲೆ ಯಾರದೋ ಪಾತ್ರೆಯಿರಿಸಿ ಅದರಲ್ಲಿ ಅಕ್ಕಿ ಹಾಕಿ ತಿದಿಯೊತ್ತಿದರೆ ಭುಗಿಲೇಳುವ ಬೆಂಕಿಯಲ್ಲಿ ಅನ್ನ ಬೇಯುತ್ತಿತ್ತು. ಅಲ್ಲಿಯೆ ಊಟ; ರಾತ್ರಿ ತೇರಿನಪಕ್ಕ ನಿದ್ರೆ; ತೇರಿನ ಗಾಲಿ, ಅಚ್ಚುಗಳೆಡೆಯಲ್ಲಿ ಅವರ ಬಟ್ಟೆಬರೆಗಳ ಗಂಟು. ತಗಡಿನ ಡಬ್ಬಿಗಳನ್ನು ಕತ್ತರಿಸಿ ಕಾಳುಕಡಿಗಳನ್ನು ಹಾಕಲು ಕರಡಿಗೆ ಮಾಡುವುದು, ಸೋರುವ ಕೊಡಪಾನ ಹಂಡೆಗಳನ್ನು ದುರಸ್ತಿ ಮಾಡುವುದು ಮಾಡುತ್ತ ತಿಂಗಳುಗಟ್ಟಲೆ ಇದ್ದು ಮುಂದಿನೂರಿಗೆ ಹೋದರೆ ಬರುವುದು ವರ್ಷದ ನಂತರವೆ. ಹುಳಿ ಪದಾರ್ಥ ಹಾಕಿದರೆ ಕಿಲುಬುವ ಹಿತ್ತಾಳೆ ತಟ್ಟೆ, ಲೋಟ, ಬೋಗುಣಿಗಳೆ ಇದ್ದ ಕಾಲ; ಎಲ್ಲ ವರ್ಷಕ್ಕೊಮ್ಮೆ ಇವರು ಬರುವುದನ್ನು ಕಾಯುತ್ತಿದ್ದರು. ಹೌದಲ್ಲ! ತನಗೇ ಈಗ ಅರವತ್ತು. ಅಂದರೆ ಆವಾಗಲೇ ನಲವತ್ತು ವರ್ಷದವನಿರಬಹುದಾದ ಇಕ್ಬಾಲು ಈಗ ತನ್ನೆದುರು ಈಗಿರುವವನ ಪ್ರಾಯದವನಾಗಿರಲು ಸಾಧ್ಯವಿಲ್ಲ. ಆದರೆ ತೇಟು ಹಾಗೇ ಇದ್ದಾನೆ! ಹೌದು, ತಾನಾಗ ಕಾಲೇಜಲ್ಲಿ ಓದುತ್ತಿದ್ದೆ. ಇಕ್ಬಾಲು ಜೊತೆ ಒಬ್ಬ ಹುಡುಗನಿರುತ್ತಿದ್ದ; ನೆನಪಿದೆ. ಹೆಸರು ಅಕ್ರಾಂ ಅಂದನಲ್ವ ಈಗಷ್ಟೆ? 'ಹೌದೇ ಹೌದು... ನಂಗೆ ನೆನಪಾಯ್ತೋ! ನೀನಾಗ ಸಣ್ಣ ಹುಡುಗ. ಎರಡು ವರ್ಷ ಹಿಂದೆ ಕಲಗಾರರು ಸಿಕ್ಕಿದ್ರೆ ಎಷ್ಟು ಒಳ್ಳೇದಿತ್ತು ಅಂತ ಹುಡುಕಿದ್ದೆ ನೋಡು...' ಅಂದರು.

'ಈಗೆಲ್ಲ ಸ್ಟೀಲು ಬಂತಲ್ಲ ಒಡೆಯ್ರೆ. ಹಿತ್ತಾಳೆ ತಾಮ್ರ ಎಲ್ಲ ಫ್ಯಾಶನ್ನಿಗೆ ಇಡುವುದಾಯ್ತಲ್ಲ. ಎಂತದು ಕೆಲ್ಸ ಇತ್ತ?' ಅಂದ.

ತಮ್ಮ ಅಪ್ಪಯ್ಯನ ಹವ್ಯಾಸ ಅದು. ಅಜ್ಜ ಮುತ್ತಜ್ಜನ ಕಾಲದಿಂದ ಬಂದ ಹಿತ್ತಾಳೆಯ ಕೊಳದಪ್ಪಲಿ, ತಾಮ್ರದ ಬೃಹದಾಕಾರದ ಹಂಡೆಗಳು, ಹಿತ್ತಾಳೆಯ ತಾಟುಗಳು, ಬೋಗುಣಿ, ಲೋಟ, ಕೊಳಗ ಏನೇನೋ... ಎಲ್ಲ ಗಟ್ಟಿತನಕ್ಕೆ ಒತ್ತುಕೊಟ್ಟವು; ದಪ್ಪನವು. 'ಒಜ್ಜೇಂದ್ರೆ ಒಜ್ಜೆ. ಸಾಲದ್ದಕ್ಕೆ ಎಲ್ಲಾ ಸಮಾರಾಧನೆಗೆ ಬರುವ ಗಾತ್ರದ್ದೆ; ದಿನಾ ನಮಗೆಂತಕೆ? ಸುಮ್ಮನೆ ಮಾರಿ ಸ್ಟೀಲೋ